**ಸರ್ಕಾರಿ ನೌಕರರ ವೇತನದಲ್ಲಿ ನೀರಾವರಿ ಲೆವಿವಸೂಲಿ**

2285 - ಶ್ರೀ ಬಾಬಾಗೌಡ ಪಾಟೀಲ್ (ಕಿತ್ತೂರು) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ರಾಜ್ಯ ಸರ್ಕಾರಿ ನೌಕರರ ವೇತನದಲ್ಲಿ ಶೇಕಡಾ 10 ಮತ್ತು ಶಾಸಕರ ಹಾಗೂ ಮಂತ್ರಿಗಳ ವೇತನದಲ್ಲಿ ಶೇಕಡಾ 50 ಹಣವನ್ನು ನೀರಾವರಿ ಲೆವಿಯಾಗಿ ಸಂಗ್ರಹಿ ನೀರವರಿ ಅಭಿವೃದ್ಧಿಯನ್ನು ಅಭಿವೃದ್ಧಿಪಡಿಸುವ ವಿಚಾರವನ್ನು ಸರ್ಕಾರ ಆಲೋಚನೆ ಮಾಡುವುದೇ?*

ಆ) *ಹಾಗಿದ್ದಲ್ಲಿ, ಈ ವಿಚಾರವನ್ನು ಶೀಘ್ರದಲ್ಲಿ ಪರಿಶೀಲಿಸಲಾಗುವುದೇ?*

ಶ್ರೀ ಎಸ್. ಬಂಗಾರಪ್ಪ (ಮುಖ್ಯಮಂತ್ರಿಗಳು) :

ಅ) ಈ ವಿಚಾರವು ಸರ್ಕಾರದ ಆಲೋಚನೆಯಲ್ಲಿಲ್ಲ.

ಆ) ಉದ್ಭವಿಸುವುದಿಲ್ಲ

**ಸರ್ಕಾರಿ ಕಛೇರಿಗಳಲ್ಲಿ ಸಾರ್ವಜನಿಕ ಕುಂದುಕೊರತೆ ಕುಂತು**

2367 - ಶ್ರೀ ಪಿ. ಬಸವರಾಜ್ (ಬ್ರಹ್ಮಾವರ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ರಾಜ್ಯಪಾಲರ ಭಾಷಣದಲ್ಲಿ ಸರ್ಕಾರವು ಸಾರ್ವಜನಿಕ ಕುಂದುಕೊರತೆಗಳ ನಿವಾರಣೆಗೆ ಕುಂದುಕೊರತೆ ಕೌಂಟರ್ ಪ್ರಾರಂಭಿಸುವ ಕುರಿತು ಪ್ರಸ್ತಾಪಿಸಲಾಗಿತ್ತೆ ಹಾಗೂ ಇದನ್ನು ಕಾರ್ಯರೂಪಕ್ಕೆ ತರಲಾಗಿದೆಯೆ*

ಆ) *ಹಾಗಿದ್ದಲ್ಲಿ, ವಿವರ ನೀಡುವುದು, ತಾಲ್ಲೂಕು ಮಟ್ಟದ ಕಛೇರಿಗಳಲ್ಲಿ ಜನಸಾಮಾನ್ಯರ ಕಾನೂನುಬದ್ಧ ಮನವಿಗಳಿಗೆ ಲಿಖಿತ ಮೂಲಕವಾಗಲಿ, ಕ್ರಿಯಾಮೂಲಕವಾಗಲೀ ಪ್ರತಿಕ್ರಿಯೆ ಸಂಬಂಧಿಸಿದ ಅಧಿಕಾರಿಗಳಿಂದ ದೊರಕುತ್ತಿಲ್ಲವೆನ್ನುವುದು ನಿಜವಲ್ಲವೇ?*

ಇ) *ವಿಭಾಗ ಮಟ್ಟದಲ್ಲಿ ಭಾರತೀಯ ಆಡಳಿತ ಸೇವೆಗೆ ಸೇರಿದ (ಐಎಎಸ್) ಅಧಿಕಾರಿಗಳಿಗೆ ಸುಲಲಿತವಾಗಿ ಕನ್ನಡ ಬಾರದೇ ಇರುವುದು ಜನಸಾಮಾನ್ಯರ ಕಷ್ಟಗಳಿಗೆ ನೇರವಾಗಿ ಸ್ಪಂದಿಸುವಲ್ಲಿ ತೊಡಗುವುದು ಮತ್ತು ಜನಸಾಮಾನ್ಯರ ಮನವಿಗಳು ಈ ಕಾರಣದಿಂದ ಅನಗತ್ಯ ವಿಳಂಬವಾಗುವುದು ಸರ್ಕಾರಕ್ಕೆ ತಿಳಿದಿಲ್ಲವೆ?*

ಶ್ರೀ ಎಸ್. ಬಂಗಾರಪ್ಪ (ಮುಖ್ಯಮಂತ್ರಿಗಳು) :

ಅ) ಹೌದು

ಆ) ಸಾರ್ವಜನಿಕ ಸಂಪರ್ಕವಿರುವ ಎಲ್ಲಾ ಸರ್ಕಾರದ ಕಛೇರಿಗಳಲ್ಲಿ ಸಾರ್ವಜನಿಕ ಕುಂದುಕೊರತೆಗಳನ್ನು ಪರಿಹರಿಸಲು ಕೌಂಟರ್‌ಗಳನ್ನು ಸ್ಥಾಪಿಸಲು ಕ್ರಮ ಕೈಗೊಳ್ಳಲಾಗಿದೆ. ಮನವಿಗಳಿಗೆ ಪ್ರತಿಕ್ರಿಯೆ ದೊರೆಯುತ್ತಿಲ್ಲವೆಂಬುದು ನಿಜವಲ್ಲ.

ಇ) ಸರ್ಕಾರದ ಗಮನಕ್ಕೆ ಬಂದಿಲ್ಲ.

**ಐಎಎಸ್ ಅಧಿಕಾರಿಗಳ ಆಸ್ತಿಗಳ ವಿವರ**

2113 - ಶ್ರೀ ಎಂ. ವಿ ವೆಂಕಟಪ್ಪ (ಮುಳಬಾಗಲು) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *1989-90-91ನೇ ವರ್ಷದಲ್ಲಿ ರಾಜ್ಯ ಲೋಕಾಯುಕ್ತ ಬಲೆಗೆ ಬಿದ್ದ ಐ.ಎ.ಎಸ್. ಅಧಿಕಾರಿಗಳ ಹೆಸರುಗಳೇನು?*

ಆ) *ಅವರುಗಳ ಬಳಿ ದೊರಕಿದ ಚರ ಮತ್ತು ಸ್ಥಿರ ಆಸ್ತಿಗಳ ವಿವರಗಳೇನು?*